# ಕೈ ಮೀರಿ ಹೋದ ಮಾತಿಗೆ ಮರುಗಬಾರದು

(Version – 2)

1. **Ref.**: Hare Srinivasa, Taratamyokta Bhajana Samagra Sangraha Vol-2, by Dr. Purnabodha Vadirajacharya Kadagadakai, Belagavi.
2. **Note:** Singer has followed these lyrics.
3. **Note:** Ankita here is Guru Purandara Vittala.
4. **Note:** There is one more song - kai mIri hOda mAtige huDuka bAradu. In this Ankita is Purandara viTTala. Lyrics are also different and is separately listed as Version – 1.
5. **Note:** These lyrics (Version – 2) are very popular and many singers have sung it.

ಕೈ ಮೀರಿ ಹೋದ ಮಾತಿಗೆ ಮರುಗಬಾರದು

ಮೈಮೇಲೆ ಎಚ್ಚರಿಲ್ಲದಲೆ ತಿರುಗಬಾರದು ॥ ಪ ॥

ತಂದೆ ತಾಯಿ ಮಾತು ಕೇಳದ ಮಕ್ಕಳಿರಲೇ ಬಾರದು

ಬಂಧು ಬಳಗದಲ್ಲಿ ಜಗಳವಾಡಬಾರದು ॥ 1 ॥

ನಡತೆ ಹೀನಳಾಗಿ ಹೆಣ್ಣು ಬಾಳಬಾರದು

ಕಡು ವೈರತ್ವ ಮಾಡುವವನ ಮಾತು ಕೇಳಬಾರದು ॥ 2 ॥

ಸತಿ ಸುತರಿಗೆ ಪುರುಷ ವಂಚನೆ ಮಾಡಬಾರದು

ಅತಿ ಉನ್ಮತ್ತನಾಗಿ ಧರ್ಮ ಅಳಿಯಬಾರದು ॥ 3 ॥

ಆಚಾರವಿಲ್ಲದವರ ಮನೆ ಊಟ ಮಾಡಬಾರದು

ವಿಚಾರವಿಲ್ಲದಾ ಸಭೆಯಲಿ ಕೂಡ್ರಬಾರದು ॥ 4 ॥

ಪಂಕ್ತಿಯೊಳಗೆ ಭೇದ ಮಾಡಿ ಬಡಿಸಬಾರದು
ಬಿಂಕದಿಂದ ಪರರ ಮನಸು ನೋಯಿಸಬಾರದು ॥ 5 ॥

ಸಾವು ನೋವುಗಳಿಲ್ಲವೆಂದು ತಿಳಿಯಬಾರದು
ದೇವನೊಬ್ಬನಿರುವನೆಂದು ಮರೆಯಬಾರದು ॥ 6 ॥

ಪರರ ಸಂಪತ್ತು ನೋಡಿ ಮನದಿ ಕೊರಗಬಾರದು
ಗುರು ಪುರಂದರ ವಿಠ್ಠಲ ರಾಯನ ಕೊಂಡಾಡದೇ ಇರಲೆಬಾರದು ॥ 7 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಮಾನವನ ನಡವಳಿಕೆಗಳು ಯಾವ ಜಾಡನ್ನು ಹಿಡಿಯಬಾರದೆಂಬುದನ್ನು ನಿಷೇಧ ರೂಪದಲ್ಲಿ ಪುರಂದರ ದಾಸರು ದಿಗ್ದರ್ಶಿಸಿದ್ದಾರೆ. ಕುಟುಂಬದಲ್ಲಿ ಗೃಹ ಸೌಖ್ಯವನ್ನೂ ಹೊರಗೆ ಸಮಾನ ಸೌಖ್ಯವನ್ನೂ ಕಾಪಾಡಲು ನಾವೇ ಇಂಥ ಕಟ್ಟುಪಾಡುಗಳನ್ನು ಹಾಕಿಕೊಳ್ಳುವುದು ವಿಹಿತ. 'ಮಂಕು ಜೀವನಾಗಿ ಮುಕ್ತಿ ಬೇಡಬಾರದು' ಎಂಬ ಮಾತಂತೂ ದಾಸರ ಕ್ರಿಯಾಪೂರ್ಣ ಚಿಂತನಶೀಲತೆಯನ್ನು ವ್ಯಕ್ತಪಡಿಸುತ್ತದೆ.

**Classification:** Keerthane
**Ankita:** guru purandara vittala
**Location:** NA
**Category:** Hitanudi, Jeevana Sutra
**Sub-Category:** sampattu, mana, deva, huttu, marana, oota, mosa, dharma, mane, hennu, tande, tayi, makkalu, bandhu, shatru, kai,
**Pravachana:** NA
**Explanation:** NA